## ಹಾಸನದ 3 ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ

**ಎಸ್.ಸಿ. 7/2016.**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ರಮೇಶ | ಪಿಡಬ್ಲ್ಯೂ 5 | |
| ತಂದೆಯ/ಗಂಡನ ಹೆಸರು | ಃ ವೆಂಕಟರಾಮಯ್ಯ | ಸಿಡಬ್ಲ್ಯೂ 10 | |
| ವಯಸ್ಸು | ಃ 61 | ದಿನಾಂಕ: | 13-02-2020 |
| ಕಸುಬು | ಃ ವ್ಯವಸಾಯ | ಸಾಕ್ಷಿದಾರರಿಗೆ ಪ್ರಮಾಣವಚನ | |
| ವಾಸ | ಃ ಕಿತ್ತಾನೆ | ಬೋಧಿಸಲಾಯಿತು | |

**ಮುಖ್ಯ ವಿಚಾರಣೆ - ಸರ್ಕಾರಿ ಅಭಿಯೋಜಕರಿಂದಃ- ಅಭಿಯೋಜನೆಯ ಪರವಾಗಿಃ-**

ಸಾಕ್ಷಿಗೆ ಮತ್ತೊಂದು ಸ್ಥಳ ಮಹಜರ್ ನ್ನ ತೋರಿಸಲಾಗಿ ಸಾಕ್ಷಿ ತಮ್ಮ ರುಜು ಗುರುತಿಸಿದರು ಅದಕ್ಕೆ ನಿಪಿ 4 ಎಂದು ಸಾಕ್ಷಿ ರುಜುಗೆ ನಿಪಿ 4 ಎ ಎಂದು ಗುರುತಿಸಲಾಯಿತು. ಪ್ರಾಸಾ 2 ರವರ ಮನೆಯಲ್ಲಿ ಕಳ್ಳತನವಾದ ಕುರಿತು ಮಹಜರ್ ಮಾಡಿದ್ದರು, ಆ ಕಾಲಕ್ಕೆ ಚಾಸಾ 7 ಇದ್ದರು. ಪೋ.ರು ಜೊತೆ ಐದು ಜನ ಅಸಾಮಿಗಳು ಇದ್ದರು , ಅವರ ಪೈಲಕಿ ಇಂದು ನ್ಯಾ ದ ಮುಂದೆ 5 ನೇ ಆರೋಪಿ ಸಹಾ ಇದ್ದ ಎಂದು ಸಾಕ್ಷಿ ಗುರುತಿಸಿದರು. ಇನ್ನುಳಿದ 04 ಜನರನ್ನ ನನಗೆ ತೋರಿಸಿದರೆ ನಾನು ಅವರನ್ನ ಗುರುತಿಸುತ್ತೇನೆ. ಇಂದು 1 ನೇ ಆರೋಪಿ ಗೈರುಹಾಜರಾಗಿದ್ದು ಆತನ ಗುರುತಿಸುವಿಕೆಗೆ ಆತನ ಪರ ವಕೀಲರು ತಕರಾರು ಇಲ್ಲವೆನ್ನುತ್ತಾರೆ. ಸದರಿ ಅಸಾಮಿಗಳನ್ನ ಮನೆ ಕಳ್ಳತನವಾಗಿದ್ದರ ಕುರಿತು ಕರೆತಂದಿದ್ದರು.

**ಪಾಟೀಸವಾಲುಃ- ಶ್ರೀ ಹೆಚ್ ಜೆ ಆರ್ ವಕೀಲರಿಂದ**

ನಾನು ಪ್ರಾಸಾ 2 ರವರ ಮನೆಗೆ ಹೋಗುವಷ್ಟರಲ್ಲಿ ಪೋ.ರು ಎಲ್ಲರನ್ನ ಕರೆತಂದಿದ್ದರು ಎಂದರೆ ನಿಜ. ನಿಪಿ 4 ರಲ್ಲಿಯ ಸಂಗತಿಗಳು ಗೊತ್ತಿಲ್ಲ ಎಂದರೆ ನಿಜ. ಪೋಲೀಸರು ನನ್ನನ್ನ ಎಂದೂ ಠಾಣೆಗೆ ಪ್ರಸ್ತುತ ಕೇಸಿನ ಕುರಿತಾಗಿ ಕರೆಸಿರುವುದಿಲ್ಲ. ಪೋಲೀಸರು ಸದರಿ ಅಸಾಮಿಗಳನ್ನ ಪ್ರಾಸಾ 2 ರವರ ಮನೆಗೆ ಕರೆಸಿದ ಅರ್ಧ ಗಂಟೆ ನಂತರ ನಾನು ಸದರಿಯವರ ಮನೆಗೆ ಹೋಗಿದ್ದೆನು. ಆಗ ಅಂದಾಜು 12/ 12-30 ಮದ್ಯಾಹ್ನ ಆಗಿರಬಹುದು. ನಾನು ನಿಪಿ 4 ಕ್ಕೆ ಪೋ ಠಾಣೆಯಲ್ಲಿ ರುಜು ಹಾಕಿದ್ದೆ ಎಂದರೆ ನಿಜ.

ಮರುವಿಚಾರಣೆಃ ಇಲ್ಲಾ

**(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ.ಸ.ಇದೆ.**

**(ಚಂದ್ರಶೇಖರ್ ಮರಗೂರ್)**

**3 ನೇ ಹೆಚ್ಚುವರಿ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**